**ದಿನಾಂಕ : 09.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಕೆ.ಜೆ.ಟಿ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ, ದಾಖಲಾತಿಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

ಅವಾರ್ಡಿನ ದೃಢೀಕೃತ ನಕಲನ್ನು ನಿಪಿ 1 ಎಂದು, ಪರಿಹಾರ ನಿರ್ಣಯದ ದೃಡೀಕೃತ ನಕಲನ್ನು ನಿಪಿ 2 ಎಂದು, ಮುಚ್ಚಳಿಕೆ ಪತ್ರದ ದೃಢೀಕೃತ ನಕಲನ್ನು ನಿಪಿ 3 ಎಂದು, ವೋಚರಿನ ದೃಢೀಕೃತ ನಕಲನ್ನು ನಿಪಿ 4 ಎಂದು, ಅದೇಶದ ದೃಢೀಕೃತ ನಕಲನ್ನು ನಿಪಿ 5 ಎಂದು, ರೆಫರೆನ್ಸ್ ಫಾರಂ ನಿಪಿ 6 ಎಂದು, ಸರ್ಟಿಫಿಕೇಟ್ ಅನ್ನು ನಿಪಿ 7 ಎಂದು, ದೃಢೀಕರಣ ಪತ್ರವನ್ನು ನಿಪಿ 8 ಎಂದು, ಚೆಕ್‌ಲೀಫ್ ಅನ್ನು ನಿಪಿ 9 ಎಂದು, ಫಾರಂ ಬಿ ಯ ದೃಢೀಕೃತ ನಕಲನ್ನು ನಿಪಿ 10 ಎಂದು 18(1) ಅರ್ಜಿಯನ್ನು ನಿಪಿ 11 ಎಂದು ಗುರುತಿಸಲಾಯಿತು.

ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.